Apex Bank to District Co-operative Central Banks is 4½ per cent for Short Term Loans 5 per cent for Medium Term Loans.

(b) The rate of interest charged is 6 to 6½ per cent for Short-term Loans.

6½ per cent to 7 per cent for Medium Term Loans.

(c) Profit earned by

	1968-69	*1969-70*	*1970-71*
		(Rs. in lakhs)	
Apex Bank	31.79	32.06	29.76
District Central Co-operative Banks	66.08	67.78	66.45

ಚಿಂತಾಮಣಿ ತಾಲ್ಲೂಕಿನಲ್ಲಿ ವೃದ್ಯಾಪ್ಯ ವೇತನದ ಬಗ್ಗೆ ಕೋರಿಬಂದ ಅರ್ಜಿಗಳು.

ಶ್ರೀ ಚೌಡರೆಡ್ಡಿ (ಚಿಂತಾಮಣಿ) :—

೩೭. (೬೮).—ಹಣಕಾಸು ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಿಂದ ಎಷ್ಟು ವೃದ್ಧಾಪ್ಯ ವೇತನದ ಅರ್ಜಿಗಳು ಸರ್ಕಾರಕ್ಕೆ ಬಂದಿವೆ ;

(ಆ) ಅವುಗಳ ಪೈಕಿ ಎಷ್ಟು ಮಂದಿಗೆ ವೃದ್ಧಾಪ ವೇತನ ಮಂಜೂರು ಮಾಡಲಾಗಿದೆ ; ಎಷ್ಟು ಮಂದಿಗೆ ತಿರಸ್ಕೃತವಾಗಿದೆ ? ಉಳಿದ ಅರ್ಜಿಗಳೆಷ್ಟು ?

(ಇ) ಸರ್ಕಾರದವರು ಇಂಥ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ಪ್ರೊಸೆಸ್ ಮಾಡುತ್ತಾರೆ ?

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸು ಮಂತ್ರಿಗಳು).—

ಉತ್ತರ :—೧-೧೧-೧೯೭೦ ರಿಂದ ೩೧-೧೦-೭೧ರವರೆಗೆ ೧೬೮ ಅರ್ಜಿಗಳು ಬಂದಿವೆ. ೧-೧೧-೭೧ ರಿಂದ ೩೧-೧೦-೭೨ರವರೆಗೆ ೨೮೧ ಅರ್ಜಿಗಳು ಬಂದಿವೆ. ಒಟ್ಟು ೪೪೯ ಅರ್ಜಿಗಳು.

೧೧೬ ಮಂದಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಲಾಗಿದೆ.

೧೧೯ ಮಂದಿಗೆ ತಿರಸ್ಕೃತವಾಗಿದೆ.

೨೧೪ ಅರ್ಜಿಗಳು ಉಳಿದಿವೆ. ಈ ಅರ್ಜಿಗಳೆಲ್ಲ ಈಚೆಗೆ ಬಂದಿರುವುವು.

ಇಂತಹ ಅರ್ಜಿಗಳನ್ನು ಹೆಚ್ಚು ಗಮನಕೊಟ್ಟು ವಿಳಂಬ ಮಾಡದೆ ಪ್ರೊಸೆಸ್ ಮಾಡಬೇಕೆಂದುರೆವಿನ್ಯೂ ಅಧಿಕಾರಿಗಳಿಗೆ ಸರ್ಕಾರದಿಂದ ಆಜ್ಞೆ ಮಾಡಲ್ಪಟ್ಟಿದೆ.